## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 683 |
| ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 25-09-2020. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬರುವ ಗ್ರಾಮ ಪಂಚಾಯತ್‌ಗಳಿಂದ ಡಿಮ್ಯಾಂಡ್ ಪುಸ್ತಕದನ್ವಯ ಇಲ್ಲಿಯವರೆವಿಗೆ ವಸೂಲಿಯಾಗದೆ ಬಾಕಿ ಇರುವ ತೆರಿಗೆಯ ಮೊತ್ತ ಎಷ್ಟು; | ಕಲಬುರಗಿ ಜಿಲ್ಲೆಯ ಗ್ರಾಮ ಪಂಚಾಯತಿಗಳಿಂದ ಡಿಮ್ಯಾಂಡ್ ಪುಸ್ತಕಗಳಿಂದ ಇಲ್ಲಿಯವರೆಗೆ ವಸೂಲಿಯಾಗದೆ ಬಾಕಿ ಇರುವ ಮೊತ್ತ ರೂ.7243.13 ಲಕ್ಷಗಳು.<br><br>ಯಾದಗಿರಿ ಜಿಲ್ಲೆಯ ಗ್ರಾಮ ಪಂಚಾಯತಿಗಳಿಂದ ಡಿಮ್ಯಾಂಡ್ ಪುಸ್ತಕಗಳಿಂದ ಇಲ್ಲಿಯವರೆಗೆ ವಸೂಲಿಯಾಗದೆ ಬಾಕಿ ಇರುವ ಮೊತ್ತ ರೂ.2154.71 ಲಕ್ಷಗಳು. |
| (ಆ) | ಸರ್ಕಾರ ಯಾವ ಮಾನದಂಡದ ಆಧಾರದ ಮೇಲೆ ತೆರಿಗೆ ಪಾವತಿಯ ದರವನ್ನು ನಿಗಧಿಪಡಿಸುತ್ತದೆ; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ಮತ್ತು ಅನುಸೂಚಿ-IV ರಂತೆ ಗ್ರಾಮ ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗಿರುವ, ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ಗ್ರಾಮ ಪಂಚಾಯತಿಗಳು ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. |
| (ಇ) | ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಏಕರೂಪ ತೆರಿಗೆ ದರ ಇದೆಯೇ; ಇದ್ದಲ್ಲಿ, ವರ್ಗವಾರು ತೆರಿಗೆಯ ವಿವರಗಳೇನು? | ಗ್ರಾಮ ಪಂಚಾಯತಿಗಳಲ್ಲಿ ಏಕರೂಪ ತೆರಿಗೆ ವ್ಯವಸ್ಥೆ ಇರುವುದಿಲ್ಲ. ಆಯಾ ಗ್ರಾಮ ಪಂಚಾಯತಿಗಳು ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ಈ ಕೆಳಕಂಡ ವರ್ಗಗಳಲ್ಲಿ ಭೂಮಿ ಮತ್ತು ಕಟ್ಟಡಗಳ ಮೇಲೆ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ತೆರಿಗೆಗೆ ಗುರಿಯಾಗುವ ಸ್ವತ್ತಿನ ಮೂಲ ಮೌಲ್ಯವನ್ನು ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957 ರ 45 ಬಿ ಪ್ರಕರಣದ ಅಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ನಿರ್ಧರಿಸಲಾಗುತ್ತದೆ.<br><br>1. ನಿವಾಸಿ ಕಟ್ಟಡಗಳು<br>2. ವಾಣಿಜ್ಯ ಕಟ್ಟಡಗಳು<br>3. ಕೈಗಾರಿಕೆಗಳು<br>4. ಖಾಲಿ ಜಮೀನು<br>5. ಮೊಬೈಲ್ ಟವರ್‌ಗಳು<br>6. ವಿಂಡ್ ಮಿಲ್‌ಗಳು<br>7. ಸೋಲಾರ್ ಪಾರ್ಕ್‌ಗಳು |

ಸಂ. ಗ್ರಾಅಪ 734 ಗ್ರಾಪಂಅ 2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು